**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ.**

**ಸಿಸಿ ನಂ. 663/2017**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ ಕೌಸರ್ | **ಪಿ.ಡಬ್ಲ್ಯೂ-1** |
| **ಗಂಡನ ಹೆಸರು** | ಃ ಮೊಹಮ್ಮದ್ ಹಸ್ಪಾಕ್ | **ಸಿಡಬ್ಲ್ಯೂ-1** |
| **ವಯಸ್ಸು** | ಃ 36 ವರ್ಷ | **ಪ್ರಾಮಾಣೀಕರಿಸಿದ** |
| **ಉದ್ಯೋಗ** | ಃ ಮನೆಕೆಲಸ | **ದಿಃ 09.09.2022** |
| **ವಾಸ** | ಃ ಆನಂದಪುರ | |

ಇನ್ ಕ್ಯಾಮೆರಾ ಪ್ರೊಸಿಡಿಂಗ್ಸ್ ಮೂಲಕ ಸಾಕ್ಷಿಯ ವಿಚಾರಣೆಯನ್ನು ತೆಗೆದುಕೊಳ್ಳಲಾಯಿತು. ಆರೋಪಿತರು ಉದ್ದೇಶ ಪೂರ್ವಕವಾಗಿ ಸಾಕ್ಷಿಯ ವಿಚಾರಣೆ ನಡೆಯುವ ಸಂದರ್ಭದಲ್ಲಿ ಗೈರು ಹಾಜರಾಗಿದ್ದು, ಆದ್ದರಿಂದ ಆರೋಪಿತರ ಜಾಮೀನನ್ನು ರದ್ದು ಮಾಡಿ ಸಾಕ್ಷಿಯ ವಿಚಾರಣೆಯನ್ನು ತೆಗೆದುಕೊಳ್ಳಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ-**

1ನೇ ಆರೋಪಿ ನನ್ನ ಗಂಡ, 2ನೇ ಆರೋಪಿ ನನ್ನ ಮಾವ, 3ನೇ ಆರೋಪಿತಳು ನನ್ನ ಅತ್ತೆ, 6ನೇ ಆರೋಪಿ ನನ್ನ ಗಂಡನ ಅಣ್ಣ ಆಗಬೇಕು. ರಜೀಯಾ ಬೇಗಂ ನನ್ನ ಗಂಡನ ಅಕ್ಕ ಆಗಬೇಕು, ಶಾಜೀಯಾ ಬೇಗಂ ನನ್ನ ಗಂಡನ ತಂಗಿ ಆಗಬೇಕು. ಮುಸ್ಕಾನ್ ನನ್ನ ಗಂಡನ ಅಣ್ಣನ ಹೆಂಡತಿ, ನಾಜಿಯಾ ಬಾನು ಈಗಿನ 1ನೇ ಆರೋಪಿತನ 2ನೇ ಹೆಂಡತಿ ಆಗಿರುತ್ತಾರೆ. ಇವರೆಲ್ಲರ ಮೇಲೆ ನಾನು ದೂರು ಕೊಟ್ಟಿದ್ದೆ. 1ನೇ ಆರೋಪಿತನ ಜೊತೆ ಮದುವೆ ಆಗುವ ಪೂರ್ವದಲ್ಲಿ 2004 ಇಸವಿಯಲ್ಲಿ ನಾನು ಅಸಾದ್ದುಲ್ಲಾ ಖಾನ್ ರವರ ಜೊತೆ ನನ್ನ ಮದುವೆ ಆಗಿತ್ತು. ನಮ್ಮಿಬ್ಬರ ವೈವಾಹಿಕ ಜೀವನದಿಂದ ನಮಗೆ 2 ಮಕ್ಕಳು ಜನಿಸಿದ್ದವು. ನಾನು ಅಸಾದ್ದುಲ್ಲಾ ರವರ ಜೊತೆ ಸುಮಾರು ಏಳೆಂಟು ವರ್ಷಗಳ ಕಾಲ ವೈವಾಹಿಕ ಜೀವನ ನಡೆಸಿದ್ದೆ. ನಂತರ ಅಸಾದ್ದುಲ್ಲಾ ರವರು ನನ್ನ ಮೇಲೆ ಸಂಶಯ ಪಡುವುದು, ಮಾನಸಿಕ

ಕಿರುಕುಳ ಕೊಡುವುದು ಮಾಡುತ್ತಿದ್ದ ಅದೇ ಅಲ್ಲದೇ ಅವನಿಗೆ ಮೊದಲು ಮದುವೆ ಆಗಿತ್ತು. ಅಸಾದ್ದುಲ್ಲಾರವರು ಮನೆಯ ಖರ್ಚಿಗೆ ಹಣ ಕೊಡುತ್ತಿರಲಿಲ್ಲ ಆದ್ದರಿಂದ ನಾನು ಅಡಿಕೆ ಸುಲಿಯುವುದು ಮತ್ತು ಸುಲಿಸುವುದು ಕೆಲಸ ಮಾಡುತ್ತಿದ್ದೆ. ಅಡಿಕೆಯನ್ನು 1ನೇ ಆರೋಪಿ ತಂದು ಹಾಕುತ್ತಿದ್ದ. ಆ ಸಂದರ್ಭದಲ್ಲಿ ಕೆಳದಿ ರಸ್ತೆಯಲ್ಲಿ ಅಸಾದ್ದುಲ್ಲಾರವರ ಮನೆಯಲ್ಲಿ ವಾಸ ಮಾಡುತ್ತಿದ್ದೆ. ಆ ಸಂದರ್ಭದಲ್ಲಿ 1ನೇ ಆರೋಪಿತನು ನನಗೆ ಏಕೆ ತೊಂದರೆಯನ್ನು ಅನುಭವಿಸುತ್ತಿದ್ದೀಯಾ, ನಿನ್ನ ಗಂಡ ಅಸಾದ್ದುಲ್ಲಾ ನಿನಗೆ ಕಿರುಕುಳ ನೀಡುತ್ತಿದ್ದು, ನೀನು ಅವನನ್ನು ಬಿಟ್ಟು ಬರಬಹುದಲ್ಲಾ ಎಂದು ಹೇಳಿ ಹಾಗೂ ನಿನ್ನನ್ನು ಮದುವೆ ಆಗುತ್ತೇನೆ ಎಂದು ಹೇಳುತ್ತಿದ್ದ. 1ನೇ ಆರೋಪಿ ನಮ್ಮ ಮನೆಗೆ ಅಡಿಕೆ ಹಾಕಲು ಬಂದಾಗ ಹಾಗೂ ಫೋನ್ ಮೂಲಕ ಈ ಮೇಲಿನ ಸಂಗತಿಯನ್ನು ಹೇಳುತ್ತಿದ್ದ. ಅಸಾದ್ದುಲ್ಲಾ ನೀಡುತ್ತಿದ್ದ ಕಿರುಕುಳವನ್ನು ಸಹಿಸಲಾಗದೆ 1ನೇ ಆರೋಪಿತನ ಮೇಲೆ ಅವನು ನನ್ನನ್ನು ಚೆನ್ನಾಗಿ ನೋಡಿಕೊಳ್ಳಬಹುದು ಎಂದು ವಿಶ್ವಾಸ ಬಂದಿತ್ತು. ಆ ಸಂದರ್ಭದಲ್ಲಿ ನಾನು 1ನೇ ಆರೋಪಿತನಿಗೆ ನನಗೆ ಎರಡು ಮಕ್ಕಳಿದ್ದು ಅವರನ್ನು ಬಿಡಲು ಆಗುವುದಿಲ್ಲ ಎಂದು ಹೇಳಿದ್ದೆ. ಅದಕ್ಕೆ 1ನೇಆರೋಪಿ ನಿನ್ನ ಮಕ್ಕಳನ್ನು ಸಹ ನಾನು ನೋಡಿಕೊಳ್ಳುತ್ತೇನೆ ಎಂದು ಹೇಳಿದ್ದ. 1ನೇ ಆರೋಪಿತನ ಜೊತೆ ಮದುವೆಯಾಗುವ ಇಚ್ಛೆಯಿಂದ ಹಾಗೂ ಅಸಾದ್ದುಲ್ಲಾ ನೀಡುತ್ತಿದ್ದ ಕಿರುಕುಳವನ್ನು ಸಹಿಸಲಾಗದೇ ನಾನು ಅಸಾದ್ದುಲ್ಲಾರವರಿಗೆ ಕುಲ್ಲಾ (ವಿಚ್ಛೇದನ) ವನ್ನು ಮುಸ್ಲೀಂ ಸಂಪ್ರಾದಾಯದಂತೆ ಕೊಟ್ಟಿರುತ್ತೇನೆ. ವಿಚ್ಛೇದನ ನೀಡಿದ 3 ತಿಂಗಳ ನಂತರ ಅಂದರೆ ದಿನಾಂಕಃ **28.05.2014** ರಂದು 1ನೇ ಆರೋಪಿಯ ಜೊತೆ ಮದುವೆಯಾಗಿರುತ್ತದೆ. ನಮ್ಮಿಬ್ಬರ ಮದುವೆಯೂ ಕೆಳದಿಯ ರಸ್ತೆಯ ನೂರೂಲ್ಲಾ ಮಸೀದಿಯಲ್ಲಿ ಆಗಿರುತ್ತದೆ. ಆ ಸಂದರ್ಭದಲ್ಲಿ 1ನೇ ಆರೋಪಿತನ ತಂದೆ, ಅವನ ಸಹೋದರರು ಮತ್ತು ಅವನ ಭಾವ ಬಂದಿದ್ದು.

ಕಾರಣ ಮಸೀದಿ ಒಳಗಡೆ ಕೇವಲ ಪುರುಷರಿಗೆ ಪ್ರವೇಶ ಇರುತ್ತದೆ. ಮದುವೆಯಾದ ನಂತರ ಕೆಳದಿ ರಸ್ತೆಯಲ್ಲಿ ಇರುವ 1ನೇ ಆರೋಪಿತನ ಮನೆಗೆ ವೈವಾಹಿಕ ಜೀವನ ನಡೆಸಲು ಹೋಗಿರುತ್ತೇನೆ. 1ನೇ ಅರೋಪಿತನ ಮನೆಗೆ ಬಂದಾಗ ನನ್ನ ಮಗಳು ಸಹ ನನ್ನ ಜೊತೆ ಬಂದಿದ್ದಳು, ನನ್ನ ಮಗ ನನ್ನ ತಾಯಿಯ ಬಳಿ ಇದ್ದ. ನಾನು 1ನೇ ಆರೋಪಿತನ ಮನೆಯಲ್ಲಿ ಇದ್ದಾಗ 1, 2, 3 ಮತ್ತು 6 ಹಾಗೂ 4ನೇ ಆರೋಪಿತರು ಇರುತ್ತಿದ್ದರು. ಮತ್ತು ನಾಜಿಯಾ ಬೇಗಂ ಕೋಂ ಇಮ್ರಾನ್ ಖಾನ್ ರವರು ಸಹ ಇರುತ್ತಿದ್ದರು. ಶಾಜಿಯಾ ಬೇಗಂ ಮತ್ತು ಮುಸ್ಕಾನ್‌ರವರು ಸಹ ಇರುತ್ತಿದ್ದರು. ದೋಷಾರೋಪಣೆ ಪತ್ರದಿಂದ ಕೈ ಬಿಟ್ಟ 4ನೇ ಆರೋಪಿತಳನಾದ ನಾಜಿಯಾ ಬೇಗಂ ಶಿವಮೊಗ್ಗದಿಂದ ಆಗಾಗ ಬಂದು ಹೋಗುತ್ತಿದ್ದರು. ಮದುವೆಯಾದ ದಿನಾಂಕದಿಂದ 15 ದಿನಗಳವರೆಗೆ ಆರೋಪಿತರು ನನ್ನನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ. ನಂತರದಲ್ಲಿ 1ನೇ ಆರೋಪಿತನ ಅಕ್ಕ ತಂಗಿಯರು ಮತ್ತು ಅತ್ತೆ ನನಗೆ ಆಗಾಗ ಕಿರಿಕಿರಿಯನ್ನು ಕೊಡಲು ಪ್ರಾರಂಭಸಿರುತ್ತಾರೆ. ಆರೋಪಿತರು ನನ್ನನ್ನು ಗಂಡನನ್ನು ಬಿಟ್ಟು ಬಂದವಳೆಂದು ಮತ್ತು ನನ್ನ ಮಕ್ಕಳು ಬೇರೆಯವನ ಮಕ್ಕಳು ಎಂದು ಹೀಯಾಳಿಸುತ್ತಿದ್ದರು. 1ನೇ ಆರೋಪಿತ ಬೇರೆ ಆರೋಪಿತನ ಪ್ರಚೋದನೆಗೆ ಒಳಗಾಗಿ ನನಗೆ ಅವಾಚ್ಯ ಶಬ್ದಗಳಿಂದ ಬೈಯುವುದು, ಮಾನಸಿಕ ಮತ್ತು ದೈಹಿಕ ಕಿರುಕುಳ ಕೊಡುತ್ತಿದ್ದ. 2, 3 ಹಾಗೂ 6ನೇ ಆರೋಪಿತರು ನನ್ನ ಗಂಡನ ವ್ಯವಹಾರಕ್ಕೆ ದುಡ್ಡು ಬೇಕೆಂದು ಬೇಡಿಕೆ ಇಟ್ಟಿದ್ದರು. ಮದುವೆ ಸಂದರ್ಭದಲ್ಲಿ 1ನೇ ಆರೋಪಿತನಿಗೆ ಬೈಕ್ ಖರೀದಿಸಲು 50 ಸಾವಿರ ರೂಪಾಯಿ ನಗದು ಹಣ, ಬಂಗಾರವನ್ನು ಕೊಟ್ಟಿದ್ದು. ಮದುವೆ ಸಂದರ್ಭದಲ್ಲಿ ಸಾಕಷ್ಟು ವರದಕ್ಷಿಣೆ ನೀಡಿದ್ದರು ಸಹ ಆರೋಪಿತರು ಹೆಚ್ಚಿನ ವರದಕ್ಷಿಣೆ 5 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಬರಬೇಕೆಂದು ಬೇಡಿಕೆ ಇಟ್ಟಿದ್ದರು. ಆ ಕಾರಣದಿಂದ ನಾನು ಅಣ್ಣನಿಗೆ ವರದಕ್ಷಿಣೆ ಹಣವನ್ನು ಕೇಳಲು ಆಗದೇ ಸಂಘದಿಂದ 3 ಲಕ್ಷ ರೂ. ಹಣವನ್ನು

ಸಾಲ ಪಡೆದು ಆರೋಪಿತರಿಗೆ ಕೊಟ್ಟಿರುತ್ತೇನೆ. ಆರೋಪಿತರಿಗೆ 3 ಲಕ್ಷ ರೂ. ಹಣವನ್ನು ಕೊಡುವವರೆಗೂ ಸುಮ್ಮನೆ ಇದ್ದು ಹಣ ಕೊಟ್ಟ ನಂತರ ಮತ್ತೆ ಮೊದಲಿನ ಹಾಗೇ ಕಿರುಕುಳ ಕೊಡಲು ಪ್ರಾರಂಭಿಸಿರುತ್ತಾರೆ. ಅದೇ ರೀತಿ ನನ್ನನ್ನು ಮನೆ ಬಿಟ್ಟು ಹೋಗು ಎಂದು ಕಿರುಕುಳ ನೀಡಿರುತ್ತಾರೆ. ತದನಂತರ ನನ್ನನ್ನು ಮನೆಯಿಂದ ಹೊರಗಡೆ ಹಾಕಿರುತ್ತಾರೆ. ಆರೋಪಿತರು ಮದುವೆಯಾಗಿ 2 –3 ತಿಂಗಳ ನಂತರ ಮನೆಯಿಂದ ಹೊರಗಡೆ ಹಾಕಿರುತ್ತಾರೆ. ನಾನು ದೂರು ಕೊಡುತ್ತೇನೆ ಎಂದು ಹೇಳಿದಾಗ ಆರೋಪಿತ ನನ್ನನ್ನು ಬೇರೆ ಮನೆ ಮಾಡಿ ಕೊಟ್ಟಿರುತ್ತಾನೆ. ಬಾಡಿಗೆ ಮನೆಯಲ್ಲಿ ಸುಮಾರು ಒಂದೂವರೆ ವರ್ಷಗಳ ಕಾಲ ಚೆನ್ನಾಗಿದ್ದು ನಂತರ ಕಿರುಕುಳ ಕೊಡಲು ಪ್ರಾರಂಭಿಸಿರುತ್ತಾರೆ. ಆರೋಪಿತ ನಂತರದಲ್ಲಿ ಮನೆಗೆ ಬರುವುದನ್ನು ಮತ್ತು ಹೊಟ್ಟೆಗೆ ಬಟ್ಟೆಗೆ ನೀಡುವುದನ್ನು ನಿಲ್ಲಿಸಿದ್ದು , ಆ ಸಂದರ್ಭದಲ್ಲಿ 1 ನೇ ಆರೋಪಿತ ಕೈ ಬಿಟ್ಟ 8 ನೇ ಆರೋಪಿತಳಾದ ನಾಜಿಯಾ ಬಾನು ಗಂಡ ಮೊಹಮ್ಮದ್ ಆಸ್ಪಾಕಳನ್ನು ತನ್ನ ಮನೆಯಲ್ಲಿ ತಂದು ಇಟ್ಟು ಕೊಂಡಿದ್ದ. ಅವಳಿಗೆ ನಾನು 1 ನೇ ಆರೋಪಿತನನ್ನು ಮದುವೆ ಆಗಿರುವ ವಿಚಾರ ಗೊತ್ತಿತ್ತು. 1 ನೇ ಆರೋಪಿ ನನ್ನ ಹೊಟ್ಟೆ ಬಟ್ಟೆಗೆ ಕೊಡುತ್ತಿದ್ದ ಎನ್ನುವ ಬಗ್ಗೆ ನಾಜಿಯಾ ಬಾನುಗೆ ಗೊತ್ತಿತೊ ಇಲ್ಲವೊ ನನಗೆ ಗೊತ್ತಿಲ್ಲ. ಈ ಸಂದರ್ಭದಲ್ಲಿ ನನ್ನಿಂದ ಮಕ್ಕಳನ್ನು ಪಡೆಯಲು ರೀ ಆಪರೇಷನ್ ಮಾಡಿಸಿರುತ್ತಾನೆ. 2016 ರಲ್ಲಿ ನಾಜಿಯಾ ಬಾನನ್ನು ಮದುವೆ ಆಗಿರುತ್ತಾನೆ. ಅವಳನ್ನು ಮದುವೆ ಅಗುವ ಸಂದರ್ಭದಲ್ಲಿ 1 ನೇ ಆರೋಪಿ ನನ್ನಿಂದ ವಿಷಯವನ್ನು ಮುಚ್ಚಿಟ್ಟಿದ್ದ. 1 ನೇ ಆರೋಪಿ ನಾಜಿಯಾ ಬಾನನ್ನು 2 ನೇ ಮದುವೆ ಆಗಬಾರದೆಂದು ನಾನು ನ್ಯಾಯಾಲಯದಲ್ಲಿ ಇಂಜೆಕ್ಷನ್ ದಾವೆ ಹೂಡಿದ್ದೆ. ಆದರೂ ಕೂಡ 1 ನೇ ಆರೋಪಿ ಕೈ ಬಿಟ್ಟ ನಾಜಿಯಾ ಬಾನುವನ್ನು ನನ್ನ ಅನುಮತಿ ಇಲ್ಲದೇ ಮದುವೆ ಆಗಿರುತ್ತಾನೆ. ಈ ಬಗ್ಗೆ ನಾನು 2016 ರಲ್ಲಿ ಆರೋಪಿತರ ವಿರುದ್ಧ ಪೋಲೀಸ್ ಠಾಣೆಗೆ ದೂರನ್ನು ಕೊಟ್ಟಿರುತ್ತೇನೆ. ಅದೇ ರೀತಿ ನಾನು

ಮಸೀದಿಯವರಿಗೂ ಸಹ ದೂರನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ನಾನು 1ನೇ ಆರೋಪಿತನನ್ನು ಮದುವೆಯಾದ 3 ತಿಂಗಳ ನಂತರ ಆರೋಪಿತರು ನನಗೆ ಕೊಡುತ್ತಿದ್ದರು ಸಹ ನಾನು ಅವರ ವಿರುದ್ಧ ದೂರು ನೀಡಿರುವುದಿಲ್ಲ ಕಾರಣ 1ನೇ ಆರೋಪಿ ನನ್ನನ್ನು ಬೇರೆ ಮನೆ ಮಾಡಿ ಕೊಟ್ಟಿದ್ದ. 1ನೇ ಆರೋಪಿ ನನ್ನ ಜೊತೆ ಮುಂದೆ ಚೆನ್ನಾಗಿ  ಇರಬಹುದೆಂಬ ಆಶಾಭಾವನೆಯಿಂದ ನಾನು ದೂರು ಕೊಟ್ಟಿರಲಿಲ್ಲ. ಆರೋಪಿತರು ನನ್ನ ಸಾಯಿಸುತ್ತೇನೆ ಎಂದು ಜೀವಬೆದರಿಕೆ ಹಾಕುತ್ತಿದ್ದರು. ದೂರು ನೀಡಿದ ನಂತರ ಪೋಲೀಸರು ಪಂಚನಾಮೆ ಮಾಡಲು 1ನೇ ಆರೋಪಿತನ ಮನೆಗೆ ಬಂದಿದ್ದರು. ಪೊಲೀಸರು ಸಂಜೆ ಸುಮಾರು ಮೂರ್ನಾಲ್ಕು ಗಂಟೆಗೆ ಪಂಚನಾಮೆ ಮಾಡಿರುತ್ತಾರೆ. ಗಲಾಟೆಯಾದ ಸ್ಥಳವನ್ನು ಪೋಲೀಸರಿಗೆ ನಾನೇ ತೋರಿಸಿರುತ್ತೇನೆ. ಆ ಸಂದರ್ಭದಲ್ಲಿ ಚಾಸಾ 3 ಮತ್ತು ಇನ್ನೊಬ್ಬರು ಹಾಜರಿದ್ದರು. ಪೊಲೀಸರು ಗಲಾಟೆಯಾದ ಸ್ಥಳದಲ್ಲಿ ಪಂಚನಾಮೆ ಮಾಡಿ ಫೋಟೋ ತೆಗೆದಿರುತ್ತಾರೆ. ಆ  ಸಂದರ್ಭದಲ್ಲಿ ನನ್ನ ಮದುವೆಯ ಫೋಟೋ, ಉರ್ದು ಮತ್ತು ಇಂಗ್ಲೀಷ್ ಭಾಷೆಯಲ್ಲಿದ ವಿವಾಹ ಪ್ರಮಾಣ ಪತ್ರವನ್ನು ಪಡೆದಿರುತ್ತಾರೆ. ಪಂಚನಾಮೆಯನ್ನು ಗುರುತಿಸಿದ್ದು ಅದನ್ನು ನಿಪಿ 2 ಎಂದು,  ಸಾಕ್ಷಿಯನಲ್ಲು ಸಹಿಯನ್ನು ನಿಪಿ 2 (ಎ) ಎಂದು, ಘಟನಾ ಸ್ಥಳದಲ್ಲಿ ತೆಗೆದ ಫೋಟೋವನ್ನು ನಿಪಿ 3 ಎಂದು, ಆರೋಪಿತನ ಜೊತೆ ಮದುವೆ ಸಂದರ್ಭದಲ್ಲಿ ತೆಗೆದ ಫೋಟೋವನ್ನು ನಿಪಿ 4 ಎಂದು, ಮ್ಯಾರೇಜ್ ಸರ್ಟಿಫಿಕೇಟ್‌ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 5 ಎಂದು, ಸದರಿ  ಮ್ಯಾರೇಜ್ ಸರ್ಟಿಫಿಕೇಟ್‌ನ್ನು  ಆಂಗ್ಲ ಭಾಷೆಗೆ ತರ್ಜುಮೆ ಗೊಳಿಸಿದ ದಾಖಲೆಯನ್ನು ನಿಪಿ 6 ಎಂದು ಗುರುತಿಸಲಾಯಿತು. ನನಗೆ ಕಿರುಕುಳ ನೀಡಿದ ಆರೋಪಿತರನ್ನು ನೋಡಿದರೆ ನಾನು ಗುರುತಿಸಬಲ್ಲೆ. ನಿಪಿ 4 ರಲ್ಲಿ ಕಾಣುತ್ತಿರುವ ವ್ಯಕ್ತಿಯೇ 1ನೇ ಆರೋಪಿತನಾಗಿರುತ್ತಾನೆ, ಉಳಿದ

ಆರೋಪಿತರು ಉದ್ದೇಶ ಪೂರ್ವಕವಾಗಿ ನ್ಯಾಯಾಲಯದ ಮುಂದೆ ಗೈರು ಹಾಜರಾಗಿರುವುದರಿಂದ ಸಾಕ್ಷಿಯು ಆರೋಪಿತರನ್ನು ಗುರುತಿಸಿರುತ್ತಾರೆ ಎಂದು ತೆಗೆದುಕೊಳ್ಳಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಹಾಯಕ ಸರ್ಕಾರಿ ಅಭಿಯೋಜಕರು ಸಮಯ ಕೋರಿರುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಕಂಪ್ಯೂಟರೀಕರಿಸಲಾಯಿತು.)**

**ಓ ಹೇ ಕೇ ಸ ರಿ ಇದೆ**

**ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ಸಾಗರ.**